| | | | |
|---|---|---|---|
| Published Date: | 4 Aug 2017 | Publication: | Hosadigantha |
| Edition: | Bangalore | Page No: | 2 |

### ಐಟಿ ರಸಪ್ರಶ್ನೆ ಪ್ರಾದೇಶಿಕ ವಿಭಾಗದ ಸ್ಪರ್ಧೆ

# ಆರ್ಯನ್, ಪ್ರಣವ್ ಪ್ರಭುಗೆ ಪ್ರಶಸ್ತಿ

ದಿಗಂತ ವರದಿ: ಬೆಂಗಳೂರು, ಆ.3

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಐಟಿ ರಸಪ್ರಶ್ನೆ ಸ್ಪರ್ಧೆಯ ಪ್ರಾದೇಶಿಕ ವಿಭಾಗದಲ್ಲಿ ಪಿಎಸ್ಎಸ್‌ಬಿಬಿಎಲ್‌ಎ ಶಾಲೆಯ ವಿದ್ಯಾರ್ಥಿಗಳಾದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ವಿಜೇತರಾಗಿದ್ದಾರೆ.

ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಟಿಸಿಎಸ್ ಐಟಿ ರಸಪ್ರಶ್ನೆಯಲ್ಲಿ ಬೆಂಗಳೂರಿನ ಹಲವು ಶಾಲೆಗಳಿಂದ 1150 ಅಭ್ಯರ್ಥಿಗಳು ಭಾಗವಹಿಸಿದ್ದರು. 8ರಿಂದ 12ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ರಸಪ್ರಶ್ನೆಯಲ್ಲಿ ಪಾಲ್ಗೊಂಡಿದ್ದರು. ಇಬ್ಬರನ್ನೊಳಗೊಂಡ ಒಂದು ತಂಡದಂತೆ ಪ್ರತಿ ಸಂಸ್ಥೆಯ 10 ತಂಡಗಳಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ನೀಡಲಾಗಿತ್ತು.

ಆಟೋಮೇಶನ್, ಕಾಂಟೆಕ್ಚುವಲ್ ನಾಲ್ಡೆಜ್, ಮಶಿನ್ ಲರ್ನಿಂಗ್ ಮತ್ತು ಏಜೈಲ್ ವಿಷಯದ ಬಗ್ಗೆ ಸ್ಪರ್ಧೆಯಲ್ಲಿ ಪ್ರಶ್ನೆ ಕೇಳಲಾಗಿತ್ತು. ಇದರಲ್ಲಿ ಸ್ಪರ್ಧಿಸಿದ ವಿದ್ಯಾರ್ಥಿಗಳ ತಂಡದ ಪೈಕಿ ಅತಿ ಹೆಚ್ಚು ಅಂಕ ಪಡೆದ ಆರು ತಂಡಗಳು ಪ್ರಾದೇಶಿಕ ವಿಭಾಗದ ಅಂತಿಮ ಸುತ್ತಿನಲ್ಲಿ ಭಾಗವಹಿಸುವ ಅರ್ಹತೆ ಪಡೆದುಕೊಂಡಿದ್ದವು. ಐದು ಸುತ್ತುಗಳ ನಂತರ ಪ್ರಾದೇಶಿಕ ವಿಭಾಗದ ಅಂತಿಮ ಸುತ್ತಿನಲ್ಲಿ ಪಿಎಸ್ಎಸ್‌ಬಿಬಿಎಲ್‌ಎ ಶಾಲೆಯ ವಿದ್ಯಾರ್ಥಿಗಳಾದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ವಿಜೇತರಾದರು. ಈ ವಿದ್ಯಾರ್ಥಿಗಳಿಗೆ 60 ಸಾವಿರ ರೂ.ಗಳ ಗಿಫ್ಟ್ ವೋಚರ್ ಅನ್ನು ಬಹುಮಾನವಾಗಿ ನೀಡಲಾಯಿತು. ಮುಂಬೈನಲ್ಲಿ ನಡೆಯುವ ರಾಷ್ಟ್ರೀಯಮಟ್ಟದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಭಾಗವಹಿಸಲು ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ಅವಕಾಶ ಪಡೆದುಕೊಂಡರು.

ದಿಗಂತ ಚಿತ್ರ




**ಟಿಸಿಎಸ್ ಐಟಿ ರಸಪ್ರಶ್ನೆಯ ಸ್ಪರ್ಧೆಯ ಪ್ರಾದೇಶಿಕ ವಿಭಾಗದಲ್ಲಿ ವಿಜೇತರಾದ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ಅವರಿಗೆ ಬಹುಮಾನ ವಿತರಿಸಲಾಯಿತು.**

ಟಿಸಿಎಸ್ ಐಟಿ ರಸಪ್ರಶ್ನೆಯ ಪ್ರಾದೇಶಿಕ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದ ಇಂದಿರಾನಗರದ ಎನ್‌ಪಿಎಸ್ ಶಾಲೆಯ ವಿದ್ಯಾರ್ಥಿಗಳಾದ ಮುಕ್ತಾಜೋಶಿಪುರ ಮತ್ತು ರೋಹನ್ ಕಪೂರ್ ಅವರಿಗೆ 40 ಸಾವಿರ ರೂ.ಗಳ ಗಿಫ್ಟ್ ವೋಚರ್ ಅನ್ನು ಬಹುಮಾನವಾಗಿ ನೀಡಲಾಯಿತು. ಪ್ರಾದೇಶಿಕ ವಿಭಾಗದ ಅಂತಿಮ ಸುತ್ತಿಗೆ ಅರ್ಹತೆ ಪಡೆದ 6 ತಂಡಗಳ ವಿದ್ಯಾರ್ಥಿಗಳಿಗೆ ಟಿಸಿಎಸ್‌ನಿಂದ ಜಿಮ್ ಬ್ಯಾಗ್, ಒಟಿಜಿ ಪೆನ್‌ಡ್ರೈವ್, ಇಯರ್‌ಫೋನ್ ಮತ್ತು ಬ್ಲೂಟೂತ್ ಸ್ಪೀಕರ್‌ಗಳನ್ನು ಬಹುಮಾನವಾಗಿ ವಿತರಿಸಲಾಯಿತು.

ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಕೆ.ಜೈರಾಜ್, ಎಡಿಜಿಪಿ ಭಾಸ್ಕರ್ ರಾವ್ ಹಾಗೂ ಟಿಸಿಎಸ್ ಬೆಂಗಳೂರು ವಿಭಾಗದ ಮುಖ್ಯಸ್ಥ ನಾಗರಾಜ ಇಜಾರಿ ಅವರು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಈ ರಸಪ್ರಶ್ನೆ ಕಾರ್ಯಕ್ರಮವನ್ನು ಕ್ವಿಜ್ ಮಾಸ್ಟರ್ ಬಾಲಸುಬ್ರಮಣ್ಯನ್ ನಡೆಸಿಕೊಟ್ಟರು.